ಉ) ಸಂತಪುರದ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ. ಗೆ ಉನ್ನತೀ ಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದ್ದು. ಅಕ್ಟೋಬರ್ 2004ರ ಅಂತ್ಯದ ವೇಳೆಗೆ ಇದು ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಪ್ರಸ್ತುತ ಈ ತಾಲ್ಲೂಕಿನ ಕಮಲನಗರ ಮತ್ತು ಔರಾದ್‌ಗಳಲ್ಲಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಿಗೆ ಭಾಲ್ಕಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ. ಸಂತಪುರದಲ್ಲಿ 110 ಕೆ.ವಿ.ಗೆ ಉನ್ನತೀಕರಣಗೊಂಡ ವಿದ್ಯುತ್ ಉಪ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ಸದರೀ ವಿದ್ಯುತ್ ಉಪ ಕೇಂದ್ರದಿಂದಲೇ ಕಮಲನಗರ ಮತ್ತು ಔರಾದ್‌ಗಳಲ್ಲಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಿಗೆ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಈ ಕ್ರಮದಿಂದಾಗಿ, ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವೃತ್ಯಯದಲ್ಲಿ ಸಾಕಷ್ಟು ಸುಧಾರಣೆ ಉಂಟಾಗುವುದರ ಜೊತೆ ವೋಲ್ಟೇಜ್ ಗುಣಮಟ್ಟವೂ ಸಹ ಸುಧಾರಣೆಗೊಳ್ಳುತ್ತದೆ.

544(734) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯು ಎಷ್ಟು ಕಿ.ಮೀ. ರಸ್ತೆಯನ್ನು ನಿರ್ವಹಣೆ ಮಾಡುತ್ತಿದೆ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಕಳೆದ 3 ವರ್ಷಗಳಲ್ಲಿ ಈ ರಸ್ತೆಗಳ ನಿರ್ವಹಣೆಗಾಗಿ ಪ್ರತಿ ವರ್ಷ ಖರ್ಚು ಮಾಡಿದ ಹಣವೆಷ್ಟು (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು);

ಇ) ಜಿಲ್ಲೆಯ ಬಹುತೇಕ ರಸ್ತೆಗಳು ಮುಖ್ಯವಾಗಿ ಅಂತರ ರಾಜ್ಯಕ್ಕೆ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳು ಶಿಥಿಲಗೊಂಡು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅಂತಹ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರ ಪ್ರಸಕ್ತ ಸಾಲಿನಲ್ಲಿ ಎಷ್ಟು ಯಾವ ಕ್ರಮಗಳನ್ನು ರೂಪಿಸಲಿದೆ;

ಉ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ರಸ್ತೆ ನಿರ್ಮಾಣ ಕಾರ್ಯವನ್ನೇನಾದರು ತೆಗೆದುಕೊಳ್ಳಲಾಗುವುದೇ;

ಊ) ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯು 937–50 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ಹಾಗೂ 446.00 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳ ರಸ್ತೆ ನಿರ್ವಹಣೆ ಮಾಡುತ್ತಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ರಸ್ತೆಗಳ ವರ್ಗ	ಔರಾದ	ಭಾಲ್ಕಿ	ಬೀದರ್	ಬಸವ ಕಲ್ಯಾಣ	ಹುಮ್ನಾ ಬಾದ್	ಒಟ್ಟು
1.	ರಾಜ್ಯ ಹೆದ್ದಾರಿ	66.70	114.70	91.80	102.20	70.80	446.00
2.	ಜಿಲ್ಲಾ ಮುಖ್ಯ ರಸ್ತೆ	256.60	168.70	184.10	168.10	160.00	937.50
	ಒಟ್ಟು	**323.30**	**283.40**	**375.70**	**270.30**	**230.80**	**1383.50**

ಆ) ಕಳೆದ 3 ವರ್ಷಗಳಲ್ಲಿ ಈ ರಸ್ತೆಗಳ ನಿರ್ವಹಣೆಗಾಗಿ ಪ್ರತಿ ವರ್ಷ ಖರ್ಚು ಮಾಡಿದ ಹಣದ ಅಂಕಿ ಅಂಶಗಳು ಈ ಕೆಳಗಿನಂತಿವೆ.

ಕ್ರ ಸಂ.	ತಾಲ್ಲೂಕು	2001–2002ನೇ ಸಾಲಿನ ವೆಚ್ಚ	2002–2003ನೇ ಸಾಲಿನ ವೆಚ್ಚ	2003–2004ನೇ ಸಾಲಿನ ವೆಚ್ಚ	ಒಟ್ಟು
			ರಾಜ್ಯ ಹೆದ್ದಾರಿ		
1.	ಬೀದರ್	21.00	24.03	13.50	58.62
2.	ಭಾಲ್ಕಿ	6.82	3.06	7.12	17.00
3.	ಔರಾದ	10.39	8.89	8.39	27.67
4.	ಬಸವ ಕಲ್ಯಾಣ	34.24	4.78	1.66	40.68
5.	ಹುಮ್ನಾಬಾದ್	11.80	4.15	1.63	17.58
	ಒಟ್ಟು	84.25	44.91	32.39	161.55
			ಜಿಲ್ಲಾ ಮುಖ್ಯ ರಸ್ತೆ		
1.	ಬೀದರ್	41.15	79.26	63.54	183.95
2.	ಭಾಲ್ಕಿ	47.81	70.70	55.09	173.60
3.	ಔರಾದ	40.15	85.26	90.05	215.46
4.	ಬಸವಕಲ್ಯಾಣ	34.39	51.95	36.31	121.75
5.	ಹುಮ್ನಾಬಾದ್	23.09	54.11	38.48	115.68
	ಒಟ್ಟು	186.59	340.71	283.50	810.80
	ಒಟ್ಟಾರೆ	270.84	385.62	315.89	972.35

ಇ) ಹೌದು.

ಈ) ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದು ಇದಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಹಾಗೂ ಈ ಕಾರ್ಯಕ್ರಮವನ್ನು ಸಧ್ಯದಲ್ಲಿ ಪೂರ್ಣಗೊಳಿಸಿ ರಸ್ತೆಗಳನ್ನು ರೂಪಿಸಲಿದೆ.

ಉ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ರಸ್ತೆ ಸುಧಾರಣೆ ಕಾರ್ಯ ತೆಗೆದುಕೊಳ್ಳಲಾಗುತ್ತಿದೆ.

ಊ) ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ರಸ್ತೆ ಸುಧಾರಣೆ ಕಾಮಗಾರಿಗಳನ್ನು ನಬಾರ್ಡ್ ಸಾಲಿನ ನೆರವಿನ ಅಡಿಯಲ್ಲಿ ಕೈಗೊಳ್ಳಲು ಮಂಜೂರಾಗಿರುತ್ತವೆ.

ಕ್ರ. ಸಂ.	ರಸ್ತೆಯ ಹೆಸರು	ಯೋಜನೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ರಸ್ತೆ ಅಭಿವೃದ್ಧಿಪಡಿಸುವ ಉದ್ದ (ಕಿಮೀ)
	ಔರಾದ ತಾಲ್ಲೂಕು			
1.	ಔರಾದ್ ತಾಲ್ಲೂಕಿನ ಕೌಟಾ ಔರಾದ್ ರಸ್ತೆ ಸುಧಾರಣೆ	ನಬಾರ್ಡ್	70.00	8.80
	ಬಸವಕಲ್ಯಾಣ ತಾಲ್ಲೂಕು			
2.	ಸಸ್ತಾಪೂರ ಹತ್ಯಾಳ ರಸ್ತೆ ಸುಧಾರಣೆ	ನಬಾರ್ಡ್	170.00	15.00
3.	ರಾಜೇಶ್ವರ ಲಿಂಗದಳ್ಳಿ ರಸ್ತೆ ಸುಧಾರಣೆ	ನಬಾರ್ಡ್	58.00	6.50
4.	ಧನ್ನೂರು (ಕೆ.ಕ್ರಾಸ್‌ದಿಂದ ಘಾಟಿಬೋರಾಳ)	ನಬಾರ್ಡ್	95.00	10.00
5.	ಕನಗಾಂವ ದೇವಿ ತಾಂಡಾ ಕಲಖೋರ ರಸ್ತೆ	ನಬಾರ್ಡ್	40.00	6.00
	ಹುಮ್ನಾಬಾದ್ ತಾಲ್ಲೂಕು			
6.	ದುಖಿಲಗುಂಡಿ ಕಬೀರಾಬಾವಾಡಿ ರಸ್ತೆ ಸುಧಾರಣೆ	ನಬಾರ್ಡ್	20.00	4.00
7.	ಕುಮಾರ ಚಿಂಚೋಳಿ ಹಂದಿಕೇರಾ ರಸ್ತೆ	ನಬಾರ್ಡ್	33.50	3.00
8.	ಹುಮ್ನಾಬಾದ ಬೋರಂಪಳ್ಳಿ ರಸ್ತೆ	ನಬಾರ್ಡ್	60.00	9.00
	ಭಾಲ್ಕಿ ತಾಲ್ಲೂಕು			
9.	ಡಳಕಪೂರ ಹಳ್ಳಿಖೇಡ ರಸ್ತೆ	ನಬಾರ್ಡ್	20.00	3.00
10.	ಮುರಂಬಿ ಆರ್. ಗೌಡಗಾಂವ ರಸ್ತೆ	ನಬಾರ್ಡ್	17.00	2.00
			583.50	**67.30**

ಕ್ರಮ ಸಂಖ್ಯೆ 2ರಲ್ಲಿನ ಒಂದು ಕಾಮಗಾರಿಯು ಪ್ರಗತಿಯಲ್ಲಿದ್ದು ಉಳಿದೆಲ್ಲ 9 ಕೆಲಸಗಳಿಗೆ ಟೆಂಡರ್ ಪ್ರಕ್ರಿಯೆಯಲ್ಲಿದ್ದು ಗುತ್ತಿಗೆದಾರರನ್ನು ನೇಮಕ ಮಾಡಿ ಕೆಲಸವನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು.

545(736) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕು ಕೇಂದ್ರ ಸ್ಥಾನದಿಂದ ಬೆಂಗಳೂರಿಗೆ ನೇರ ಬಸ್ಸಿನ ಸೌಲಭ್ಯವನ್ನು ಕಲ್ಪಿಸಲಾಗಿದೆ; ಹಾಗೂ ಇವು ಕೇಂದ್ರ ಸ್ಥಳದಿಂದ ಹೊರಡುವ ಹಾಗೂ ಬೆಂಗಳೂರನ್ನು ತಲುಪುವ ವಿವರಗಳನ್ನು ಒದಗಿಸುವುದು;

ಆ) ಔರಾದ್‌ನಿಂದ ಬೆಂಗಳೂರಿಗೆ ನೇರ ಬಸ್ಸಿನ ಸೌಲಭ್ಯವಿದೇಯೇ;